# ಯುರೋಪ್ ಪ್ರವಾಸ ಕಥನಗಳು ನಡೆದು ಬಂದ ದಾರಿ

## ಗೋವಿಂದ ಮಲ್ಲಣ್ಣ*

DOI: https://doi.org/10.5281/zenodo.21793378

**ABSTRACT**

ಆಲ್ಬರ್ಟ್ ಕಾಮು ಪ್ರವಾಸವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅರ್ಥೈಸಿರುವುದು ಪ್ರವಾಸದ ಮಹತ್ವವನ್ನು, ಸಾಹಿತ್ಯದಲ್ಲಿ ಅದರ ಸ್ಥಾನವನ್ನು ಸೂಚಿಸುತ್ತದೆ. 'ಪ್ರವಾಸ' ಪದಕ್ಕೆ ಆಂಗ್ಲಭಾಷೆಯಲ್ಲಿ 'ಟ್ರಾವೆಲ್' ಎಂಬ ಪದ ಸಂವಾದಿಯಾಗಿದೆ. ಟ್ರಾವೆಲ್ ಎಂಬ ಪದಕ್ಕೆ 'ಆಕ್ಸ್‌ಫರ್ಡ್ ಲರ್ನರ್' ಒಂದು ಸ್ಥಳದಿಂದ ಮತ್ತೊಂದು ದೂರದ ಸ್ಥಳಕ್ಕೆ ಅಥವಾ ವಿದೇಶಕ್ಕೆ ಪ್ರಯಾಣ ಮಾಡುವುದೇ ಪ್ರವಾಸ' ಎಂಬ ವಿವರಣೆ ನೀಡಲಾಗಿದೆ. 'ಟ್ರಾವೆಲ್' ಪದದ ನಿಷ್ಪತ್ತಿಯನ್ನು ಗಮನಿಸಿದಾಗ ಅದು ಫ್ರೆಂಚ್ ಮೂಲದ್ದು ಎಂದು ತಿಳಿದುಬರುತ್ತದೆ. ಯುರೋಪ್ ಖಂಡದಿಂದಲೇ ಪ್ರವಾಸದ ಪರಿಕಲ್ಪನೆ ಸ್ಪಷ್ಟ ರೂಪವನ್ನು ತಾಳಿದೆ ಎನ್ನಬಹುದು.

ಪ್ರವಾಸವು ಭೌತಿಕ ಸ್ವರೂಪವನ್ನು ಹೊಂದಿದ್ದರೂ ಅದೊಂದು ಮಾನಸಿಕ ಪ್ರಕ್ರಿಯೆ. ಪ್ರವಾಸದಲ್ಲಿ ದೊರಕಿದ ನೈಜ ಅನುಭವಗಳು ಮನಸ್ಸಿನ ಮೇಲೆ ಪರಿಣಾಮ ಬೀರಿ ಹೊಸ ತಿಳುವಳಿಕೆಯನ್ನು ಕೊಡುತ್ತದೆ. ಶಿಕ್ಷಣದ ಒಂದು ಭಾಗವಾಗಿ ಹಲವು ಲಾಭಗಳು ದೊರೆಯುತ್ತವೆ. ಆಂಗ್ಲಕವಿ ವಿಲಿಯಂ ಷೇಕ್ಸ್‌ಪಿಯರ್ ಹೇಳುವಂತೆ "Home-keeping youths have ever homely wits"(ವಿ.ಕೃ. ಗೋಕಾಕ್.. ಸಮುದ್ರದಾಚೆಯಿಂದ., ಪು-30) ಎಂಬ ಮಾತು ಮಗುವಿನ ಬೌದ್ಧಿಕ ಮಟ್ಟದ ವೈಶಾಲತೆಗೆ ಪ್ರವಾಸ ಹೇಗೆ ಪ್ರೇರಕ ಮತ್ತು ಪೋಷಕ ಎಂಬುದನ್ನು ತಿಳಿಸುತ್ತದೆ. ದ.ರಾ. ಬೇಂದ್ರೆಯವರು "ವಿಭೂತಿಯಿರದ ಸ್ಥಳವು ಯಾತ್ರೆಗೆ ಯೋಗ್ಯವಲ್ಲ. ದೋಷ ತಗ್ಗಿಸಿ, ಗುಣ ಹಿಗ್ಗಿಸದ ಯಾತ್ರೆ ಯಾತ್ರೆಯಲ್ಲ"(ಪ್ರವಾಸ ಸಾಹಿತ್ಯ., ಸಾ. ಶಿ ಮರುಳಯ್ಯ, ಕನ್ನಡನುಡಿ ಬೆಳ್ಳಿ ಸಂಚಿಕೆ., ಕ. ಸಾ. ಪ., 1963., ಪು-75) ಎಂದಿದ್ದಾರೆ. ಬೇಂದ್ರೆ ಅವರು ಹೇಳುವಂತೆ ಪ್ರವಾಸವು ದೋಷವನ್ನು ತಗ್ಗಿಸಿ ಗುಣವನ್ನು ಹಿಗ್ಗಿಸುವ ಕಾರ್ಯವನ್ನು ಮಾಡುತ್ತದೆ.

**KEYWORDS:** ಪ್ರವಾಸ ಕಥನ, ಯುರೋಪ, ಟ್ರಾವೆಲ್, ಪ್ರವಾಸ, ಪ್ರವಾಸ ಸಾಹಿತ್ಯ.

* **ಗೋವಿಂದ ಮಲ್ಲಣ್ಣ**, ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿಸ್ತರಣಾ ಕೇಂದ್ರ, ದೇವದುರ್ಗ.

ಪ್ರವಾಸ ಸಾಹಿತ್ಯ ಕಟ್ಟು ಕಥೆಯಲ್ಲ, ಅದು ನೈಜ ಅನುಭವಗಳ ಜೀವಂತ ಸಾಹಿತ್ಯ. ಪ್ರಪಂಚದ ಯಾವುದೇ ಭಾಷೆಯ ಸಾಹಿತ್ಯವೂ ಈ ಪ್ರಕಾರದಿಂದ ಹೊರತಾಗಿಲ್ಲ. ಸಾಹಿತ್ಯ ಚರಿತ್ರೆಯನ್ನು ಹೊಂದಿರುವ ಪ್ರಪಂಚದ ಹಲವು ಭಾಷೆಗಳಲ್ಲಿ ಪ್ರವಾಸ ಸಾಹಿತ್ಯ ರಚಿತವಾಗಿದೆ. ಪ್ರವಾಸದ ಮಹತ್ವವನ್ನು ಕುರಿತು, ಜವಾಹರಲಾಲ್ ನೆಹರು ಅವರು ಕೆ.ಪಿ.ಎಸ್ ಮೆನನ್ ಅವರ 'ವಿಶ್ವ ಪರ್ಯಟನೆ' ಕೃತಿಗೆ ಮುನ್ನುಡಿ ಬರೆಯುತ್ತಾ "ಪ್ರವಾಸ ಮಾಡುವುದು ಒಳ್ಳೆಯದು. ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ"(ವರದರಾಜ ಹುಯಿಲಗೋಳ., 'ಪ್ರವಾಸಸಾಹಿತ್ಯ' ಎಂಬ ಲೇಖನ 'ಪ್ರಬುದ್ಧ ಕರ್ನಾಟಕದ' ಚಿನ್ನದ ಸಂಚಿಕೆಯಲ್ಲಿ 1969, ಪು–348)ಎಂದಿದ್ದಾರೆ. ಬರಗೂರು ರಾಮಚಂದ್ರಪ್ಪ ಅವರು ಪಿ. ಆರ್. ತಿಪ್ಪೇಸ್ವಾಮಿ ಅವರ 'ಕಲಾವಿದ ಕಂಡ ಫ್ರಾನ್ಸ್' ಕೃತಿಗೆ ಮುನ್ನುಡಿ ಬರೆಯುತ್ತಾ ಪ್ರವಾಸವು "ಅನುಭವಗಳ ಪುನರಾವಲೋಕನ ಮತ್ತು ಪುನರ್ ಸಂಯೋಜನೆ ಪ್ರಕ್ರಿಯೆ. ಪ್ರವಾಸಕ್ಕೆ ನಿರ್ದಿಷ್ಟ ಉದ್ದೇಶ, ಮಾರ್ಗ ಎಲ್ಲವೂ ಇರುತ್ತದೆ. ಪರಿವೀಕ್ಷಣೆಯ ಒತ್ತಾಸೆಯಿರುತ್ತದೆ. ವ್ಯಕ್ತಿಯ ಒಳಹೊರಗುಗಳೆಲ್ಲ ಎಚ್ಚರಗೊಂಡು, ಕಣ್ಣೊಳಗೆ ಎಲ್ಲವನ್ನೂ ತುಂಬಿಕೊಂಡು ನೋಡುತ್ತವೆ"(ಪಿ.ಆರ್ ತಿಪ್ಪೇಸ್ವಾಮಿ, ಕಲಾವಿದ ಕಂಡ ಫ್ರಾನ್ಸ್, ಮುನ್ನುಡಿ.. ಪು–iix)ಎಂದಿದ್ದಾರೆ. ನಾವು ನೋಡಿದ್ದನ್ನು ಬರೆಯುವಾಗ ಒಳಗಣ್ಣು ಮತ್ತೂ ಸ್ಪಷ್ಟವಾಗಿ ನೋಡುತ್ತದೆ. ಪ್ರವಾಸ ಕಥನವು ತಾವು ನೈಜವಾಗಿ ಪಡೆದ ಅನುಭವಗಳನ್ನು ಪುನಃ ಅವಲೋಕಿಸುವ ಅವಕಾಶವನ್ನು ನೀಡುತ್ತದೆ. ಅದರ ಮೂಲಕ ಅನುಭವಗಳನ್ನು ಮರುರಚಿಸಿ ಸಂಯೋಜಿಸುತ್ತದೆ.

ಹೇಮಲತಾ ಮಹಿಷಿ ಅವರು "ತಿಳಿಯದ ವಿಷಯಗಳನ್ನು ತಿಳಿಯಬೇಕೆಂಬ ಕುತೂಹಲವೇ ಮನುಷ್ಯನನ್ನು ಪ್ರವಾಸಿಯನ್ನಾಗಿಸಿತು ಎಂದು ನಾನು ಭಾವಿಸುತ್ತೇನೆ"(ಹೇಮಲತಾ ಮಹಿಷಿ.. ಯೂರೋ–ದರ್ಶನ., ಪು–1)ಎಂದಿದ್ದಾರೆ. ಪ್ರವಾಸದ ಉದ್ದೇಶ ಕೇವಲ ಮನೋರಂಜನೆ ಮಾತ್ರವಲ್ಲ. ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಕೂಡ ಪ್ರವಾಸ ಮಾಡಲಾಗುತ್ತದೆ. ತಮ್ಮ ಸ್ವಂತ ಸ್ಥಳದಿಂದ ಬೇರೆ ಸ್ಥಳಗಳಿಗೆ ಹೋದಾಗ ಆ ಪ್ರದೇಶವು ನಮ್ಮ ಕುತೂಹಲಕ್ಕೆ ಕಾರಣವಾಗುತ್ತದೆ. ಕುತೂಹಲವು ನೋಡಿದ ಸ್ಥಳಗಳ ಬಗ್ಗೆ ತಿಳಿಯಬೇಕೆಂಬ ಹಂಬಲವನ್ನು ಹುಟ್ಟಿಸುತ್ತದೆ. ಅಲ್ಲಿ ನೋಡಿ ಗ್ರಹಿಸಿ ಪಡೆದ ವಿಶಿಷ್ಟವಾದ ಅನುಭವಗಳು ನಮ್ಮ ಜ್ಞಾನ ವಿಸ್ತಾರಕ್ಕೆ ಕಾರಣವಾಗುತ್ತದೆ. ಆ ಅನುಭವಗಳನ್ನು (ಜ್ಞಾನವನ್ನು) ನಾವು ರಸವತ್ತಾಗಿ ಮತ್ತೊಬ್ಬರಲ್ಲಿ ಬಣ್ಣಿಸಿ ಹೇಳುತ್ತೇವೆ. ಪ್ರವಾಸ ಸಾಹಿತ್ಯ ಹುಟ್ಟಿಕೊಳ್ಳುವುದೇ ಇಂತಹ ಸಂದರ್ಭಗಳಲ್ಲಿ, ಗಳಿಸಿದ ಅನುಭವವನ್ನು ಬರವಣಿಗೆಯ ರೂಪಕ್ಕೆ ಇಳಿಸಿದರೆ ಸಾಹಿತ್ಯವಾಗುತ್ತದೆ. ಆದ್ದರಿಂದ ನಾವು ಪ್ರವಾಸ ಸಾಹಿತ್ಯದ ಪ್ರಾಚೀನತೆಯನ್ನು ಜನಪದ ಸಾಹಿತ್ಯದಿಂದಲೇ ಗುರುತಿಸಬಹುದು. ಬಾಗ್ದಾದಿನ ಸಿಂದಾಬಾದ್‌ನ ಸಮುದ್ರಯಾನದ ಸಾಹಸಗಳು, ಮಂಟೇಸ್ವಾಮಿಯ ಮಹಾಕಾವ್ಯ. ಮಲೆಮಹದೇಶ್ವರನ ಮಹಾಕಾವ್ಯ ಇದಕ್ಕೆ ನಿದರ್ಶನವಾಗಿದೆ. ಮಂಟೇಸ್ವಾಮಿ ಮತ್ತು ಮಲೆಮಹದೇಶ್ವರ ಕಾವ್ಯಗಳು

ಚಲನಶೀಲ ಕೃತಿಗಳು. ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ ಗುಣಧರ್ಮವುಳ್ಳ ಕೃತಿಗಳು. ತಮ್ಮೊಳಗೆ ಒಂದು ಅನಿರ್ವಚನೀಯ ಪ್ರವಾಸಗಾಥೆಯನ್ನು ಹೊಂದಿರುವ ಕಲಾಶಿಲ್ಪಗಳು.

ಶಿಷ್ಟ ಸಾಹಿತ್ಯ ಪರಂಪರೆಯಲ್ಲಿ ವಿಶ್ವದ ಮೊದಲ ಪ್ರವಾಸ ಕೃತಿ ಯಾವುದು ಎನ್ನುವುದರ ಬಗ್ಗೆ ಏಕಾಭಿಪ್ರಾಯವಿಲ್ಲ. 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಸಂಶೋಧನೆ ಮಾಡಿದ ಅನುರಾಧ ಬಿ.ಟಿ. ಅವರು ಪೆಟ್ರಾರ್ಕ್ಸ್ (ಕ್ರಿ.ಶ. 1304–1374)ಅವರು ಬರೆದ 'ಅಸೆಂಟ್ ಆಫ್ ಮೌಂಟ್ ವೆಂಟೋಕ್ಸ್' ಎಂಬ ಕೃತಿಯೇ ವಿಶ್ವದ ಪ್ರಥಮ ಪ್ರವಾಸ ಸಾಹಿತ್ಯ ಕೃತಿ ಎಂದಿದ್ದಾರೆ. 'ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಉಗಮ ಮತ್ತು ವಿಕಾಸ' ಎಂಬ ಶೀರ್ಷಿಕೆಯಲ್ಲಿ ಸಂಶೋಧನೆ ಕೈಗೊಂಡ ಶೇಖರ ಸಿ. ಕೆ ಅವರು 'ದ ಜರ್ನಿಯಿಂಗ್ ಆಫ್ ದ ಮಾಸ್ಟರ್ ಆಫ್ ದ ಕ್ಯಾಪ್ಟನ್ ಆಫ್ ಈಜಿಪ್ಟ್' ಎಂಬ ಅನಾಮಧೇಯನ ಪುಸ್ತಕ ಜಾಗತಿಕ ಪ್ರವಾಸ ಸಾಹಿತ್ಯದ ಮೊದಲ ಕೃತಿ ಎಂದಿದ್ದಾರೆ. ಹೆಚ್. ಎಲ್. ನಾಗೇಗೌಡರು 'ಪ್ರವಾಸಿ ಕಂಡ ಇಂಡಿಯಾ' ಪುಸ್ತಕದಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಬಗ್ಗೆ, ಅವರ ಬರವಣಿಗೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಲೇಖಕರು ಈ ಕೃತಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಬರಹಗಳನ್ನು ಒಂದು ಕಡೆ ಸಂಗ್ರಹ ಮಾಡುವ ಕಾರ್ಯವನ್ನು ಮಾಡಿದ್ದಾರೆ. ಆದರೆ ಈ ಕೃತಿಯಲ್ಲಿಯೂ ವಿಶ್ವದ ಮೊದಲ ಪ್ರವಾಸ ಕೃತಿ ಯಾವುದು ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ. ವಿಕಿಪೀಡಿಯಾದಲ್ಲಿ ಜಾಗತಿಕ ಪ್ರವಾಸ ಸಾಹಿತ್ಯದ ಬಗ್ಗೆ ಪರಿಶೀಲಿಸಿದಾಗ ಗ್ರೀಕ್ ನಾಗರಿಕತೆಯ ಸಂದರ್ಭದಲ್ಲಿಯೇ ಪ್ರವಾಸ ಕೃತಿಯನ್ನು ಬರೆಯಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಅದರ ಪ್ರಕಾರ ಪೌಸಾನಿಯಸ್' (ಕ್ರಿ.ಪೂ. 110–180) ಎಂಬ ಭೂಗೋಳ ತಜ್ಞ ಗ್ರೀಕ್ ದೇಶಕ್ಕೆ ಭೇಟಿ ನೀಡಿ ಬರೆದಿರುವ 'ಡಿಸ್ಕ್ರಿಪ್ಷನ್ ಆಫ್ ಗ್ರೀಸ್' ಎಂಬ ಬರಹ ಜಾಗತಿಕ ಪ್ರವಾಸದ ಮೊದಲ ದಾಖಲೆಯಾಗಿದೆ ಎಂದು ತಿಳಿದುಬರುತ್ತದೆ. ಜಾಗತಿಕ ಸಾಹಿತ್ಯದ ಮೊದಲ ಪ್ರವಾಸ ಕೃತಿಯು ಯುರೋಪ್ ಖಂಡದಲ್ಲಿಯೇ ರಚಿತವಾಗಿದೆ.

ಪ್ರವಾಸ ಸಾಹಿತ್ಯಕ್ಕೆ ಪಂಚೇಂದ್ರಿಯಗಳಿಂದ ಪಡೆದ ಅನುಭವವೇ ಮೂಲ ಸರಕು. ಸಾಮಾನ್ಯ ಅರ್ಥದಲ್ಲಿ 'ಪ್ರವಾಸ' ಎಂದರೆ 'ಒಂದು ನಿರ್ದಿಷ್ಟ ಉದ್ದೇಶದೊಂದಿಗೆ, ತಕ್ಕ ಯೋಜನೆಯೊಂದಿಗೆ, ಮನೋರಂಜನೆಯ ಕಾರಣದಿಂದ ವ್ಯಕ್ತಿ ಅಥವಾ ಗುಂಪು ಕೈಗೊಳ್ಳುವ ಪ್ರಯಾಣವೇ ಪ್ರವಾಸ'. ಬೆಂಗಳೂರು ವಿಶ್ವವಿದ್ಯಾಲಯದಿಂದ ಗುರುಪ್ರಸಾದ್ ಎಂಬುವವರ ಮಾರ್ಗದರ್ಶನದಲ್ಲಿ 'ಸಾಹಿತಿಗಳ ವಿದೇಶ ಪ್ರವಾಸ : ಒಂದು ತೌಲನಿಕ ಅಧ್ಯಯನ' ಎಂಬ ಪ್ರಬಂಧ ಮಂಡಿಸಿರುವ ನಳಿನಾ ಎಸ್. ಅವರು ಪ್ರವಾಸ ಎಂಬ ಪದವನ್ನು ನಿರ್ವಚಿಸುತ್ತಾ 'ಪ್ರವಾಸಿ ತಾನು ಚಾಕ್ಷುಷದಲ್ಲಿ ಕಂಡ ಬದುಕಿನ ವಿಸ್ತಾರಗಳನ್ನು ಅಕ್ಷರದಲ್ಲಿ ಹಿಡಿದಿಡುವ ಪ್ರಯತ್ನ' ಎಂದಿದ್ದಾರೆ. ಪ್ರವಾಸಕ್ಕೆ ನಿರ್ಧಿಷ್ಟವಾದ (ಖಚಿತವಾದ ಅದರ ಸ್ವರೂಪ, ಲಕ್ಷಣ ಹೀಗೆ ಪೂರ್ಣ ಅರ್ಥವನ್ನು ಒಳಗೊಂಡಂತೆ) ಒಂದು ವ್ಯಾಖ್ಯೆಯನ್ನು

ಹೇಳಲಾಗುವುದಿಲ್ಲ. ಇದಕ್ಕೆ ಕಾರಣ ಕಾಲ ದೇಶ ಸಂದರ್ಭಕ್ಕೆ ಅನುಗುಣವಾಗಿ ಅದರ ವ್ಯಾಪ್ತಿ, ಸ್ವರೂಪ, ಲಕ್ಷಣಗಳು ಬದಲಾಗುತ್ತಿರುತ್ತದೆ. ಪ್ರವಾಸ ಜೀವನದ ಅವಿಭಾಜ್ಯ ಅಂಗವಾಗಿದೆ. ಪ್ರವಾಸ ಎನ್ನುವುದು ಮಾನವ ನಾಗರಿಕನಾಗುವ ಮೊದಲಿನಿಂದಲೇ ಇರುವಂತಹದ್ದು, ಆಹಾರಕ್ಕಾಗಿ, ಉಪಜೀವನ ನಿರ್ವಹಣೆಗಾಗಿ ಆದಿಮಾನವ ಅಲೆಮಾರಿಯಾಗಿದ್ದ. ತಾನು ನಾಗರಿಕನಾಗಿ ಬೆಳೆದಂತೆಲ್ಲಾ ಧಾರ್ಮಿಕ ಕಾರಣಕ್ಕಾಗಿಯೋ, ಜ್ಞಾನ ದಾಹ ನೀಗಿಸಿಕೊಳ್ಳಲೋ, ಸಾಮ್ರಾಜ್ಯ ವಿಸ್ತರಣೆಗೋ, ಪರ ದೇಶ/ಖಂಡಗಳನ್ನು ಹುಡುಕಲು ಪ್ರವಾಸ ಮಾಡಿದ. ಪ್ರವಾಸ ಎಂಬ ಪರಿಕಲ್ಪನೆ ಹೀಗೆ ಮೂಡಿರಬಹುದು. ಇಂದು ಈ ಕಲ್ಪನೆ ವಿಸ್ತರಿಸುತ್ತಾ ಹೋಗಿ ಪ್ರಪಂಚವೆ 'ವಿಶ್ವಗ್ರಾಮ'ವಾಗಿ ರೂಪುಗೊಂಡಿದೆ. ಮತ್ತು ಅದರ ಆಳ ವಿಸ್ತಾರಗಳು ಚಾಚಿಕೊಳ್ಳುತ್ತಲೇ ಇದೆ. ಚಂದ್ರನ ಅಂಗಳಕ್ಕೆ ಮಾನವ ಪ್ರವಾಸ ಮಾಡಿದ್ದರೆ; ಮಂಗಳನ ಅಂಗಳಕ್ಕೆ ಮಾನವ ನಿರ್ಮಿತ ಯಂತ್ರಗಳು ಪ್ರಯಾಣ ಮಾಡಿವೆ. ಹೀಗೆ ಪ್ರವಾಸದ ರೂಪ ರೇಖೆಗಳು ವಿಸ್ತರಿಸಿಕೊಳ್ಳುತ್ತಲೇ ಹೋಗುವುದರಿಂದ ಅದಕ್ಕೊಂದು ವ್ಯಾಖ್ಯೆಯ ಚೌಕಟ್ಟು ಹಾಕಿ ಕೂಡಿಡುವ ಪಾಡು ಬೇಡವೆಂಬುದೇ ಸರಿಯಾದ ನಡೆ ಎನಿಸುತ್ತದೆ.

ಭಾರತದ ಇತಿಹಾಸದಲ್ಲಿ ಹದಿನೆಂಟನೆಯ ಶತಮಾನ ಒಂದು ಮಹತ್ವಪೂರ್ಣ ಕಾಲಘಟ್ಟ, ಯುರೋಪಿಯನ್ನರ ಆಗಮನ ಭಾರತೀಯ ಜನ ಜೀವನದಲ್ಲಿ ಮಹತ್ತರವಾದ ಬದಲಾವಣೆಯ ಗಾಳಿ ಬೀಸ ತೊಡಗಿದ ಕಾಲ. "ದೇಶ ಸುತ್ತು ಕೋಶ ಓದು" ಎಂಬ ಗಾದೆ ಮಾತಿನಂತೆ ಜ್ಞಾನದ ಹೊಸ ಮಾರ್ಗವನ್ನು ತೋರಿದ ಕಾಲ. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ 20ನೇ ಶತಮಾನದ ಹೊತ್ತಿಗೆ ಜನರ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಹೊಸ ಚಿಂತನೆಗಳು ಮೂಡ ತೊಡಗಿದ್ದವು. ಇದರ ಫಲವಾಗಿ ಸಾಹಿತ್ಯದಲ್ಲೂ ಕಥೆ, ನಾಟಕ, ಕಾದಂಬರಿ, ಆತ್ಮಕಥೆಯ ಜೊತೆಗೆ 'ಪ್ರವಾಸ ಸಾಹಿತ್ಯ' ಎಂಬ ಹೊಸ ಸಾಹಿತ್ಯ ಪ್ರಕಾರವು ಮೂಡಿಬಂದಿತು. ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ಇಂದು ವಿಪುಲವಾಗಿ ರಚಿತವಾಗಿವೆ. 'ನದಿ ದಾಟಿ ಪ್ರವಾಸ ಮಾಡಬಾರದು' ಎಂಬ ನಂಬಿಕೆಯೊಂದಿಗೆ ಬದುಕಿದ ಸಂಸ್ಕೃತಿಯೊಂದು ತನ್ನನ್ನು ತಾನು ತೆರೆದುಕೊಳ್ಳುವ ಮೂಲಕ ಹೊಸ ಜಗತ್ತಿನ ಹೊಸ ಬದುಕನ್ನು ಕಣ್ಣೆರೆದು ನೋಡಿತು. ಆ ತನ್ನ ಅನುಭವಗಳನ್ನು ದಾಖಲಿಸಿದ ಬರಹಗಳಿಂದು ಅಪಾರ ಪ್ರಮಾಣದಲ್ಲಿದೆ. ಇವುಗಳನ್ನು ಸ್ಥೂಲವಾಗಿ 'ಪ್ರವಾಸ ಕಥನಗಳು' ಎಂದು ಕರೆಯಲಾಗಿದೆ. ಬ್ರಿಟೀಷರ ಆಡಳಿತ ಪೂರ್ವದಲ್ಲಿಯೇ ಕನ್ನಡದಲ್ಲಿ ಪ್ರವಾಸ ಕಥನದ ಎಳೆಗಳು ಅಲ್ಲಲ್ಲಿ ಕಂಡುಬರುತ್ತದೆ. ಮನುಷ್ಯನ ಒಳಗಣ ಕುತೂಹಲ ಮತ್ತು ಸಂಶೋಧನ ಗುಣಗಳು ಪ್ರವಾಸ ಕಥನಗಳ ಬರಹಕ್ಕೆ ಮೂಲವಾಗುತ್ತದೆ. ಹೊಸತನ್ನು ನೋಡುವ, ಅವುಗಳನ್ನು ವಿವೇಚಿಸುವ, ವೈಚಾರಿಕ ದೃಷ್ಟಿಕೋನದ ಜೊತೆಗೆ ಮಾನವನಿಗಿರುವ ಸೌಂದರ್ಯ ಪ್ರಜ್ಞೆ ಪ್ರವಾಸ ಕಥನಗಳಲ್ಲಿ ಹಾಸುಹೊಕ್ಕಾಗಿರುತ್ತದೆ. ಮತ್ತು ಇದು ಜ್ಞಾನಕೋಶ ಪರಿಧಿಯ ವಿಸ್ತರಣೆಗೆ ಅವಕಾಶವನ್ನು ಒದಗಿಸುತ್ತದೆ. ಮನುಷ್ಯನ ಈ ಗುಣವೇ ಪ್ರವಾಸ ಹಾಗೂ ಪ್ರವಾಸ ಕಥನಗಳಿಗೆ ಕಾರಣವಾಗಿದೆ.

‘ಪ್ರವಾಸ ಹೋಗುವುದು, ಬರುವುದು ಮಾತ್ರವಲ್ಲ, ಬದಲಿಗೆ ಅದನ್ನು ಅಕ್ಷರಗಳಲ್ಲಿ ಮೂಡಿಸಿ ಶಾಶ್ವತಗೊಳಿಸಬೇಕು’ ಎಂದು ಬಿ.ಎ. ವಿವೇಕ ರೈ ಅವರು ಹೇಳಿದ್ದಾರೆ. ಅವರು ‘ಕನ್ನಡದಲ್ಲಿ ಪ್ರವಾಸ ಸಾಹಿತ್ಯ’ ಎಂಬ ಲೇಖನದಲ್ಲಿ ‘ಹೊರದೇಶಗಳಿಗೆ ಪ್ರವಾಸ ಹೋಗುವವರು ಪ್ರವಾಸ ಕೃತಿಯನ್ನು ಬರೆಯಲೇಬೇಕು. ಇಲ್ಲದಿದ್ದರೆ ಅವರು ದೇಶಕ್ಕೆ ದ್ರೋಹ ಬಗೆದಂತೆ. ಆತ್ಮವಂಚನೆ ಮಾಡಿಕೊಂಡಂತೆ, ಸಂಪತ್ತಿನ ಅಪವ್ಯಯ ಮಾಡಿದಂತೆ. ಕೇವಲ ಹೋದ ಪುಟ್ಟ ಬಂದ ಪುಟ್ಟ ಎಂದರೆ ಆಗದು ಅಣ್ಣಪ್ಪನ ದಂಡಿಗೆ ಹೋದರೂ ಒಂದೆ ಇಲ್ಲದಿದ್ದರೂ ಒಂದೆ’(ಬಿ.ಎ. ವಿವೇಕ ರೈ, ಕನ್ನಡದಲ್ಲಿ ಪ್ರವಾಸ ಸಾಹಿತ್ಯ., ಪ್ರಬುದ್ಧ ಕರ್ನಾಟಕ., ಆಶ್ವಯುಜ ಸಂಚಿಕೆ.. ಪು–95) ಎಂದು ಹೇಳಿದ್ದಾರೆ. ಆದರೆ ಪ್ರವಾಸ ಹೋದವರೆಲ್ಲರೂ ಕೃತಿ ರಚಿಸುವುದಿಲ್ಲ. ರಚಿತಗೊಂಡ ಪ್ರವಾಸ ಕೃತಿಗಳೆಲ್ಲವೂ ಜನಮನ್ನಣೆ ಪಡೆಯುವುದಿಲ್ಲ. ಇದಕ್ಕೆ ಕಾರಣ ಪ್ರವಾಸದಲ್ಲಿ ಪಡೆದ ಅನುಭವಗಳನ್ನು ಬರೆಯುವ ಕಲೆ ಕೆಲವರಿಗೆ ಮಾತ್ರ ಒಲಿದಿದ್ದು, ತೌಲನಿಕ ವಿವೇಚನೆ, ಸೂಕ್ಷ್ಮ ದೃಷ್ಟಿಕೋನ, ಒಳನೋಟ, ಸಾಂಸ್ಕೃತಿಕ ಸ್ವಯಂ ಸಂಸ್ಕಾರ, ಎಂತಹ ಪರಿಸ್ಥಿತಿಯನ್ನು ಬೇಕಾದರೂ ಎದುರಿಸುತ್ತೇನೆ ಎಂಬ ಧೈರ್ಯ, ತಾನು ಹೋದ ರಾಷ್ಟ್ರಗಳ ಬಗ್ಗೆ ಸವಿಸ್ತಾರವಾದ ಜ್ಞಾನ, ಪರಿಸ್ಥಿತಿಗೆ ತಕ್ಕ ಚಾಕಚಕ್ಯತೆ, ಬರವಣಿಗೆಯ ಹದವಾದ ಕೈ. ಮೊದಲಾದ ವಿಶೇಷ ಸರಕುಗಳು ಇರುವುದು ಅಗತ್ಯ. ಇವುಗಳ ಮೂಲ ಅರಿತ ಕನ್ನಡದ ಹಲವಾರು ಲೇಖಕರು ಈ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿ ಅನೇಕ ಕೃತಿಗಳನ್ನು ಬರೆದಿದ್ದಾರೆ.

ಪ್ರವಾಸ ಕೃತಿಗಳು ತಾವು ದರ್ಶಿಸಿದ ಸಮಾಜದ ಜೀವನಕ್ರಮವನ್ನು ಕುರಿತು ಹೇಳುತ್ತವೆ. ಯುರೋಪ್ ಪ್ರವಾಸ ಕೃತಿಗಳಲ್ಲಿಯೂ ಸಮಾಜದ ಜೀವನಕ್ರಮಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಸಮಾಜದ ಆಗುಹೋಗುಗಳನ್ನು, ರೂಢಿ, ಸಂಪ್ರದಾಯಗಳನ್ನು ಒಳಗಣ್ಣಿನಿಂದ ಕಂಡು ನಿರೂಪಿಸುವ ಕೃತಿಗಳು ಹಲವಾರಿವೆ. ಕೆಲವು ಪ್ರವಾಸ ಕೃತಿಗಳು ಕೇವಲ ಪ್ರವಾಸಿಗನ ಅನುಭವಗಳ ವಿವರಗಳಾಗಿ ಮಾತ್ರ ಉಳಿದುಬಿಡುತ್ತವೆ. ಕೆಲವೇ ಕೆಲವು ಪ್ರವಾಸ ಕೃತಿಗಳು ದೇಶದ ಅಥವಾ ಜನಾಂಗದ ಮುಖವಾಣಿಯಾಗಿ ವ್ಯಾಪಕತೆಯನ್ನು ಪಡೆದುಕೊಳ್ಳುತ್ತವೆ. ದೊಡೇರಿ ವೆಂಕಟಗಿರಿರಾವ್ ಅವರು ಹೇಳುವಂತೆ ಪ್ರವಾಸಿ ಲೇಖಕ “ಮುಕ್ಕಣ್ಣನೇ ಆಗಬೇಕು, ನೋಡಲು ಎರಡು ಹೊರಗಣ್ಣು, ಅರ್ಥೈಸಿಕೊಳ್ಳಲು ಒಂದು ಜ್ಞಾನಚಕ್ಷು, ನೋಡುವವನಿಗೆ ಇರಬಹುದಾದ ಕಲಾಪ್ರಜ್ಞೆ, ಇತಿಹಾಸ ಮತ್ತು ವಾಸ್ತುಶಾಸ್ತ್ರ ಪರಿಚಯ, ಜೊತೆಗೆ ತಂತ್ರ ಕೌಶಲಗಳ ತಿಳಿವುಗಳನ್ನು ಅವಲಂಬಿಸಿದೆ. ಅವನ ಆನಂದಾನುಭೂತಿಯ ಮಟ್ಟ”(ಏಕಾಕಿ ಪ್ರವಾಸಿ., ದೊಡೇರಿ ವೆಂಕಟಗಿರಿರಾವ್, ಪು–12)ಎಂದಿದ್ದಾರೆ. ಲೇಖಕ ಕಂಡ ದೃಶ್ಯಗಳನ್ನು ಅರ್ಥೈಸಿಕೊಂಡು ಬರವಣಿಗೆಗೆ ಇಳಿಸಲು ಒಳಗಣ್ಣು ಬಹುಮುಖ್ಯವಾದುದು. ಪ್ರವಾಸಿ ಲೇಖಕನಿಗೆ ಸಾಮಾನ್ಯ ಪ್ರವಾಸಿಗನಿಂದ ಬೇರ್ಪಡಿಸುವ ವಿಶೇಷವಾದ ಸೌಂದರ್ಯಪ್ರಜ್ಞೆ, ನೂತನ ದೃಷ್ಟಿಕೋನ ಇರಬೇಕು ಎಂದು ಹೇಳಿದ್ದಾರೆ.

## ಪರಾಮರ್ಶನ ಗ್ರಂಥಗಳು:


1. ವೆಂಕಣ್ಣಯ್ಯ ಟಿ.ಎಸ್., (1948), ಪ್ರಾಚೀನ ಸಾಹಿತ್ಯ, ಮೈಸೂರು: ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್.
2. ನಾಯಕ ಹಾ.ಮಾ., (1987), ಕನ್ನಡವನ್ನು ಕಟ್ಟುವ ಕೆಲಸ, ಬೆಂಗಳೂರು: ಐ.ಬಿ.ಹೆಚ್. ಪ್ರಕಾಶನ.
3. ತಾರಾನಾಥ ಎನ್.ಎಸ್., (1990), ಪ್ರವಾಸ ಸಾಹಿತ್ಯ, ಮೈಸೂರು: ಶಕ್ತಿ ಪ್ರಕಾಶನ.
4. ವಿದ್ಯಾಶಂಕರ ಎಸ್., (1991), ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಬೆಂಗಳೂರು: ಸ್ನೇಹ ಪ್ರಕಾಶನ.
5. ನಾಯಕ ಜಿ.ಹೆಚ್., (1992), ವಿಮರ್ಶೆ ಮಾರ್ಗ (ಪರಂಪರೆ ಮತ್ತು ಸಮಕಾಲೀನ ಕನ್ನಡ ಸಾಹಿತ್ಯ ), ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
6. ಮಲ್ಲೇಪುರಂ ಜಿ. ವೆಂಕಟೇಶ, (1992), ಪ್ರವಾಸ ಸಾಹಿತ್ಯ: ಒಂದು ಅಧ್ಯಯನ, ಬೆಂಗಳೂರು: ಹೊನ್ನ ಪ್ರಕಾಶನ.
7. ಶೇಷಗಿರಿ ರಾವ್ ಎಲ್.ಎಸ್. (ಪ್ರಸಂ), (1993), ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಬೆಂಗಳೂರು: ಉದಯಭಾನು ಕಲಾಸಂಘ.
8. ಹೆಗಡೆ ಎಂ.ಜಿ. (ಸಂ), (1994), ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
9. ರಹಮತ್ ತರೀಕೆರೆ (ಸಂ), (1998), ಕನ್ನಡ ಅಧ್ಯಯನ (ಚಳಿ ಸಂಚಿಕೆ), ವಿದ್ಯಾರಣ್ಯ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
10. ರಹಮತ್ ತರೀಕೆರೆ (ಸಂ), (1999), ಕನ್ನಡ ಅಧ್ಯಯನ (ಗಾಳಿ ಸಂಚಿಕೆ), ವಿದ್ಯಾರಣ್ಯ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.